ಇ) ಈ ಬಸ್ಸಗಳನ್ನು ವಿಧಾನಸೌಧ ಮಾರ್ಗವಾಗಿ ಆರಮನೆ ರಸ್ತೆಯಲ್ಲಿ ಮೈಸೂರು ಬ್ಯಾಂಕಿನ ಮೂಲಕ ಬೆಂಗಳೂರು ಬಸ್ ನಿಲ್ದಾಣವನ್ನು ತಲುಪುವ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) ವಿಜಯನಗರ-ಶಿವಾಜಿನಗರ ಮಾರ್ಗದ 4 ಪುಷ್ಪಕ್ ಬಸ್ಸುಗಳನ್ನು ಕೆ.ಆರ್. ವೃತ್ತ ಮಾರ್ಗವಾಗಿ ಓಡಿಸಲಾಗುತ್ತಿದೆ.

ಆ) ಪುಷ್ಪಕ್ ಬಸ್ಸುಗಳನ್ನು ಅತೀ ಹೆಚ್ಚು ಪ್ರಯಾಣಿಕರ ಒತ್ತಡ ಇರುವ ಎರಡು ಸ್ಥಳಗಳ ನಡುವೆ ವೇಗವಾದ ಸಾರಿಗೆ ಸೌಲಭ್ಯ ಒದಗಿಸಲು ಪ್ರಾರಂಭಿಸಲಾಗಿದೆ. ಈ ಬಸ್ಸುಗಳನ್ನು ಹತ್ತಿರದ ಮಾರ್ಗದಲ್ಲಿ ನಿಯಮಿತ ನಿಲುಗಡೆಗಳಿಂದಿಗೆ ಕಾರ್ಯಾಚರಣೆ ಮಾಡಲಾಗುತ್ತಿದೆ ಈ ಬಸ್ಸುಗಳಿಗ ಇನ್ನೂ ಹಚ್ಚಿನ ನಿಲುಗಡೆಗಳನ್ನು ನೀಡಿದಲ್ಲಿ ವೇಗವಾದ ಸಾರಿಗೆ ಸೌಲಭ್ಯಕ್ಕಾಗಿ ಪುಷ್ಪಕ್ ಬಸ್ಸುಗಳನ್ನು ಓಡಿಸುವ ಉದ್ದೇಶಕ್ಕೆ ಧಕ್ಕೆಯಾಗುವುದು. ಆದಾಗ್ಯೂ ಇತರೆ ನಗರ ಸಾರಿಗೆ ಬಸ್ಸುಗಳು ವಿಧಾನಸೌಧ ಮತ್ತು ಸುತ್ತಮುತ್ತಲಿನ ಕಛೇರಿಗಳಿಗೆ ಹೋಗುವ ಪ್ರಯಾಣಿಕರ ಅವಶ್ಯಕತೆಗಳನ್ನು ಪೂರೈಸುತ್ತಿವೆ.

ಇ) ಪ್ರಸ್ತಾವಿಸಿರುವ ಮಾರ್ಗವು ಪುಷ್ಪಕ್ ಬಸ್ಸುಗಳ ಆಚರಣೆಗೆ ಸುತ್ತುಬಳಸಿನ ಮಾರ್ಗವಾಗಿರುತ್ತದೆ.

ಹೊಸದಾಗಿ ಹಂಚಲ್ಪಟ್ಟ ಹಸಿರು ಕಾರ್ಡುಗಳು

233- ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಹಂಚಲ್ಪಟ್ಟ ಹಸಿರು ಕಾರ್ಡುಗಳೆಷ್ಟು (ಜಿಲ್ಲಾವಾರು ಮಾಹಿತಿ ಕೊಡುವುದು):

ಆ) ಹಿಂದೆ ಇದ್ದ ಹಸಿರು ಕಾರ್ಡುಗಳೆಷ್ಟು ಹಾಗೂ ಹೆಚ್ಚುವರಿ ಹಸಿರು ಕಾರ್ಡುಗಳನ್ನು ಹಂಚಲ್ಪಟ್ಟ ಮೇಲೆ ಪಡಿತರ ಸಾಮಗ್ರಿಗಳ ವಿತರಣೆಯನ್ನು ಹೆಚ್ಚು ಮಾಡದಿರಲು ಕಾರಣವೇನು?

ಇ) ಪಡಿತರ ಸಾಮಗ್ರಿಗಳ ಪಂಚಿಕೆ ಬಹಳ ಕಡಿಮೆ ಪ್ರಮಾಣವಾಗಿ ಸಾಮಾನ್ಯ ಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ)46.85 ಲಕ್ಷ (ಹಸಿರು ಕಾರ್ಡುಗಳ ಬದಲಾಗಿ ತ್ರಿವರ್ಣ ಕಾರ್ಡುಗಳನ್ನು ಹಂಚಲಾಗಿದೆ)..

(ಜಿಲ್ಲಾವಾರು ಮಾಹಿತಿ ತಃಖ್ತೆ ಲಗತ್ತಿಸಿದೆ)

ಆ) 30.83 ಲಕ್ಷ ಕೇಂದ್ರ ಸರ್ಕಾರದವರು 68,500 ಮೆ. ಟನ್ ಅಕ್ಕಿ, 25,000 ಮೆ. ಟನ್ ಗೋಧಿಯನ್ನು ಪ್ರತಿ ತಿಂಗಳು ಬಿಡುಗಡೆ ಮಾಡುತ್ತಿದ್ದಾರೆ. ಈ ಪ್ರಕಾರ ಎಲ್ಲಾ ಕಾರ್ಡುದಾರರಿಗೆ ಆಹಾರ ಧಾನ್ಯಗಳನ್ನು ವಿತರಿಸಲಾಗುತ್ತಿದೆ. ತಿಂಗಳು ತಿಂಗಳಿಗೆ ಪಡಿತರ ಚೀಟಿಗಳು ಹೆಚ್ಚಾಗುತ್ತಿದ್ದು ಭಾರತ ಸರ್ಕಾರವು ರಾಜ್ಯಕ್ಕೆ ನೀಡುತ್ತಿರುವ ಪ್ರಮಾಣವನ್ನು ಈ ತಿಂಗಳವರೆಗೆ ಹೆಚ್ಚು ಮಾಡಿರುವುದಿಲ್ಲ. ಈ ಕಾರಣಕ್ಕಾಗಿ ಈಗ ನೀಡುತ್ತಿದ್ದ ಪ್ರಮಾಣದಲ್ಲಿ ಎಲ್ಲಾ ಕಾರ್ಡುದಾರರಿಗೆ ಆಹಾರಧಾನ್ಯ ವಿತರಿಸಲು ವ್ಯವಸ್ಥೆ ಮಾಡಲಾಗುತ್ತಿದೆ.

ಇ) ಬಂದಿದೆ. ಕರ್ನಾಟಕ ರಾಜ್ಯ ಸರ್ಕಾರವು ಪದೇ ಪದೇ ಒತ್ತಡ ತಂದ ಪರಿಣಾಮವಾಗಿ ಕೇಂದ್ರ ಸರ್ಕಾರದವರು 1994ರ ಮಾರ್ಚ್ ತಿಂಗಳಿನಿಂದ ಅನ್ವಯಿಸುವಂತೆ ರಾಜ್ಯಕ್ಕೆ ಅಕ್ಕಿ ಮತ್ತು ಗೋಧಿ ಪಂಚಿಕೆ ಪ್ರಮಾಣವನ್ನು ಹೆಚ್ಚಿಸಿರುತ್ತಾರೆ. ಈವರೆಗೆ

ಪ್ರತಿ ತಿಂಗಳಿಗೆ ಕೇಂದ್ರದಿಂದ ಹಂಚಿಕೆಯಾಗುತ್ತಿದ್ದ ಅಕ್ಕಿಯ ಪ್ರಮಾಣ 68,500 ಮೆ. ಟನ್ನಿಂದ 75,000 ಮೆ.ಟನ್ಗೆ ಹಾಗೂ ಗೋಧಿಯ ಪ್ರಮಾಣ 25,000 ಮೆ. ಟನ್ನಿಂದ 30,000 ಮೆ. ಟನ್ಗೆ ಹೆಚ್ಚಿಸಿದ್ದು ಹೆಚ್ಚುವರಿ ಹಂಚಿಕೆಯನ್ನು ಅಭಾವ ಪೀಡಿತ ಪ್ರದೇಶ ಹಾಗೂ ಹಿಂದುಳಿದ ಗುಡ್ಡಗಾಡು ಪ್ರದೇಶಗಳಿಗ ಹಂಚಿಕೆ ಮಾಡಲಾಗುವುದು. ಇದರಿಂದಾಗಿ ಸಾಮಾನ್ಯ ಜನರಿಗೆ ತೊಂದರೆ ಕಡಿಮೆಯಾಗುವುದಲ್ಲದೆ ಇನ್ನೂ ಹೆಚ್ಚಿನ ಪ್ರಮಾಣದ ಹಂಚಿಕೆ ಕೇಂದ್ರವು ನೀಡಿದಲ್ಲಿ ಇತರ ಪಡಿತರ ಚೀಟಿದಾರರಿಗೆ ಸಮರ್ಪಕವಾಗಿ ವಿತರಣೆಯನ್ನು ಹೆಚ್ಚಿಸಲಾಗುವುದು.

STATEMENT OF TRI-COLOUR CARDS IDENTIFIED DURING THE SURVEY AND ACTUALLY DISTRIBUTED AND BALANCE TO BE DISTRIBUTED.

Sl. No.	District	Identified in the survery	Actually distributed	Balance to be distributed
1.	Bangalore IR	35,487	35,487	–
2.	B'lore (Urban)	1,38,750	1,06,427	32,333
3.	B'lore (Rural)	2,86,655	2,86,655	–
4.	Belgaum	3,61,367	3,17,176	34,191
5.	Bellary	2,22,649	2,22,649	–
6.	Bidar	1,79,654	1,68,244	11,410
7.	Bijapur	3,58,500	3,47,427	11,071
8.	Chikmagalore	1,69,550	1,69 550	–
9.	Chitradurga	2,95,051	2,95,051	–
10.	D. Kannada	1,76,726	1,76,726	–
11.	Dharwar	3,77,997	3,77,997	–
12.	Gulbarga	3,54,217	3,15,003	39,214
13.	Hassan	2,02,539	2,02,539	–
14.	Coorg	74,747	74,747	–
15.	Kolar	2,48,450	2,48,450	-
16.	Mandya	2,00,243	1,60,243	40,000
17.	Mysore	4,58,549	3,61,651	98,898
18.	Raichur	2,97,995	2,85,995	12,000
19.	Shimoga	2,65,232	1,60,500	1,04,724
20.	Tumkur	3,25,262	2,31,809	93,453
21.	Uttara Kannada	1,41,007	1,41,007	–